# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ.17/4, 'ವೀರಶೈವ-ಲಿಂಗಾಯತ ಭವನ', ಸದಾಶಿವನಗರ, ಬೆಂಗಳೂರು-560 080, ದೂ:080-23602177, 23618400
e-mail: info@veerashaivamahasabha.com www.veerashaivamahasabha.org


ಸಂಖ್ಯೆ: ಎ.ಜಿ.ಎಂ./2016-17 ದಿನಾಂಕ:25-11-2016

## 42ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರ

ಅಖಿಲ ಭಾರತ ವೀರಶೈವ ಮಹಾಸಭೆಯ 2015-16ನೇ ಸಾಲಿನ 42ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಮಹಾಸಭೆಯ ಅಧ್ಯಕ್ಷರಾದ **ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರು ಇವರ ಅಧ್ಯಕ್ಷತೆಯಲ್ಲಿ "ತರಳಬಾಳು ಕೇಂದ್ರ ಸಭಾಂಗಣ", 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ. ನಗರ (ಬಿ.ಡಿ.ಎ. ಕಾಂಪ್ಲೆಕ್ಸ್ ಪಕ್ಕ), ಬೆಂಗಳೂರು-560032 ಇಲ್ಲಿ ದಿನಾಂಕ: 25-12-2016ನೇ ಭಾನುವಾರ ಬೆಳಗ್ಗೆ 11.30 ಗಂಟೆಗೆ ಈ ಕೆಳಗಿನ ಕಾರ್ಯಸೂಚಿಯಲ್ಲಿ ತಿಳಿಸಿರುವ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲು ಕರೆಯಲಾಗಿದೆ.** ಆದ್ದರಿಂದ ಸರ್ವಸದಸ್ಯರ ಸಾಮಾನ್ಯ ಸಭೆಯ ಮಾನ್ಯ ಸದಸ್ಯರೆಲ್ಲರೂ ಸಭೆಗೆ ಆಗಮಿಸಬೇಕಾಗಿ ವಿನಂತಿ.

### ಕಾರ್ಯಸೂಚಿ

1. ಪ್ರಾರ್ಥನೆ.
2. ಸ್ವಾಗತ.
3. ಶ್ರದ್ಧಾಂಜಲಿ.
4. ಸಭೆಯ ತಿಳುವಳಿಕೆ ಪತ್ರ ಓದಿ ದಾಖಲಿಸುವುದು.
5. ದಿನಾಂಕ 10-01-2016ರಂದು ನಡೆದ ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.
6. 2015-16ನೇ ಸಾಲಿನ "**ವಾರ್ಷಿಕ ವರದಿ**" ಮಂಡನೆ ಮತ್ತು ಅಂಗೀಕಾರ.
7. 2015-16ನೇ ಸಾಲಿನ "**ಲೆಕ್ಕಪರಿಶೋಧಕರ ವರದಿ**" ಮಂಡನೆ ಮತ್ತು ಅಂಗೀಕಾರ.
8. 2016-17ನೇ ಸಾಲಿನ ಮಹಾಸಭೆಯ ವಾರ್ಷಿಕ ಆಯ-ವ್ಯಯದ (ಆದಾಯ-ವೆಚ್ಚಗಳ) ಅಂದಾಜು ಪಟ್ಟಿಯ ಮಂಡನೆ ಮತ್ತು ಅಂಗೀಕಾರ.
9. 2016-17ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ಗೊತ್ತುಪಡಿಸುವುದು.
10. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.
11. ಅಧ್ಯಕ್ಷರ ಭಾಷಣ.
12. ವಂದನಾರ್ಪಣೆ.

**(ಈಶ್ವರ ಖಂಡ್ರೆ, ಸಚಿವರು)**
ಮಹಾಪ್ರಧಾನ ಕಾರ್ಯದರ್ಶಿ

**<u>ವಿಶೇಷ ಸೂಚನೆ:</u>**

1. ಸಭೆಯಲ್ಲಿ ಚರ್ಚಿಸಲಿಚ್ಛಿಸುವ ವಿಷಯಗಳನ್ನು ಟಿಪ್ಪಣಿಯೊಂದಿಗೆ ಮಾನ್ಯ ಸದಸ್ಯರು ದಿನಾಂಕ 10-12-2016 ರೊಳಗಾಗಿ ಮಹಾಪ್ರಧಾನ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡಲು ಕೋರಿದೆ.
2. 2015-16ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧಕರು ಪರಿಶೀಲಿಸಿದ ಲೆಕ್ಕ-ಪತ್ರಗಳು ಹಾಗೂ ಲೆಕ್ಕ ಪರಿಶೋಧಕರ ವರದಿಯನ್ನು ಮಹಾಸಭೆಯ ಜಾಲತಾಣ(website) **<u>www.veerashaivamahasabha.org</u>** ಇಲ್ಲಿ ವೀಕ್ಷಿಸಬಹುದಾಗಿದೆ ಹಾಗೂ ಪ್ರತಿಗಳನ್ನು ಮಾನ್ಯ ಸದಸ್ಯರುಗಳಿಗೆ ಸಭೆಯ ಮುಂಚಿತವಾಗಿ ವಿತರಿಸಲಾಗುವುದು.
3. ಈ ಸಭೆಗೆ ಆಗಮಿಸುವ ಸದಸ್ಯರು ಯಾವುದಾದರೂ ಗುರುತಿನ ಚೀಟಿ ಹಾಗೂ ಈ ತಿಳುವಳಿಕೆ ಪತ್ರವನ್ನು ತಮ್ಮೊಡನೆ ತರಬೇಕೆಂದು ವಿನಂತಿಸಲಾಗಿದೆ.

ಗೆ,
ಮಹಾಸಭೆಯ ಸಾಮಾನ್ಯ ಸಭೆಯ ಸದಸ್ಯರುಗಳಿಗೆ

**ವಿ.ಸೂ.: ಮಹಾಸಭೆಯ ಸಾಮಾನ್ಯ ಸಭೆಯ ಸದಸ್ಯರುಗಳಿಗೆ ಮಾತ್ರ ಪ್ರವೇಶ**